VIDYAVARDHAKA LAW COLLEGE LIBRARY * MYSURU *

0202/2047/0621

**II Semester 3 Year LL.B./VI Semester 5 Year B.A. LL.B./ B.B.A. LL.B./ B.Com. LL.B./ B.A. LL.B. (Maj.- Min. System) Examination, March/April 2023 (December 2022)**

# COMPANY LAW

Duration : 3 Hours Max. Marks : 100

**Instructions : 1. Answer Q.No. 9 and any five of the remaining questions.**

**2. Q.No. 9 carries 20 marks and the remaining questions carry 16 marks each.**

**3. Answer should be written either in English or Kannada completely.**

Q. No. 1. Explain the doctrine of 'Lifting of the Corporate Veil'. Marks : 16

'ಸಂಸ್ಥಾರೂಪದ ಮುಸುಕಿನ ಮೇಲೆತ್ತುವಿಕೆ' ಸಿದ್ಧಾಂತವನ್ನು ವಿವರಿಸಿ.

Q. No. 2. Explain the fundamental clauses of Memorandum of Association of a Company. Marks : 16

ಒಂದು ಕಂಪನಿಯ ಮನವಿ ಪತ್ರದಲ್ಲಿನ (ಸಂಸ್ಥಾಪನ ಪತ್ರ) ಮೂಲಭೂತ ಖಂಡಗಳನ್ನು ವಿವರಿಸಿ.

Q. No. 3. Define Prospectus. Explain its contents. Marks : 16

ಪರಿಚಯಪತ್ರವನ್ನು ವ್ಯಾಖ್ಯಾನಿಸಿ. ಅದರ ಒಳಾಂಶಗಳನ್ನು ವಿವರಿಸಿ.

Q. No. 4. What is meant by call on shares ? What are the essentials of a valid call ? Marks : 16

ಶೇರುಗಳ ಮೇಲಿನ ಕರೆ ಎಂದರೇನು ? ಒಂದು ವಿಧ್ಯುಕ್ತವಾದ ಕರೆಯ ಅವಶ್ಯಕತೆಗಳಾವುವು ?

Q. No. 5. What are the requisites of a valid meeting ? Explain the importance of Annual General Meeting. Marks : 16

ಒಂದು ವಿಧ್ಯುಕ್ತವಾದ ಸಭೆಯ ಅವಶ್ಯಕತೆಗಳಾವುವು ? ವಾರ್ಷಿಕ ಸಾಮಾನ್ಯ ಸಭೆಯ ಮಹತ್ವವನ್ನು ವಿವರಿಸಿ.

P.T.O.

Q. No. 6. Explain the rule laid down in the case 'Foss Vs. Harbottle'. State the exceptions, if any. Marks : 16

ಫಾಸ್ ವಿರುದ್ಧ ಹರಬಾಟಲ್ ಪ್ರಕರಣದಲ್ಲಿನ ನಿಯಮವನ್ನು ವಿವರಿಸಿ. ಆ ನಿಯಮಕ್ಕೆ ಅಪವಾದಗಳಿದ್ದಲ್ಲಿ ತಿಳಿಸಿ.

Q. No. 7. Who is a Company Director ? What are the powers and duties of a director ? Marks : 16

ಕಂಪನಿಯ ನಿರ್ದೇಶಕ ಎಂದರೆ ಯಾರು ? ನಿರ್ದೇಶಕನ ಅಧಿಕಾರ ಹಾಗೂ ಕರ್ತವ್ಯಗಳಾವುವು ?

Q. No. 8. Write short note on **any two** of the following : Marks : 2×8=16

ಬೇಕಾದ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ.

(a) Central Governments power to prevent mis-management.

ದುರಾಡಳಿತವನ್ನು ತಡೆಯಲು ಕೇಂದ್ರ ಸರ್ಕಾರದ ಅಧಿಕಾರ.

(b) National Company Law Tribunal.

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ.

(c) Dividend.

ಲಾಭಾಂಶ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಿಡಿಸಿ :

(a) A transferred certain land to B on a condition that B would never sell the land to coloured persons. B sold the land to a company composed exclusively of Negros. A took action for the annulment of this conveyance on the ground that the property in effect had passed to the coloured persons. Will he succeed ?

'ಅ' ನು ತನ್ನ ಭೂಮಿಯನ್ನು ಅನ್ಯವರ್ಣಿಯರಿಗೆ ಮಾರಬಾರದೆಂಬ ಶರತ್ತಿನ ಮೇಲೆ 'ಬ' ನಿಗೆ ಮಾರಿದನು. 'ಬ' ನು ನಂತರ ಅದನ್ನು ನೀಗ್ರೊಗಳಿಂದಲೇ ಕೂಡಿದ ಕಂಪನಿಗೆ ಮಾರಿದನು . 'ಅ' ನು ಶರತ್ತು ಉಲ್ಲಂಘಿಸಿದ ಕಾರಣದಿಂದ ಮಾರಾಟ ರದ್ದು ಮಾಡಲು ದಾವೆ ಹೂಡಿದನು. ಆತ ಜಯಗಳಿಸುವನೇ ?

(b) The plaintiff was the transferee of a share certificate under the seal of the defendant company. The certificate was issued by the secretary of the company, who had affixed the seal of the company and forged the signatures of two directors. Company refuses to be bound by the forged document. Decide.

ವಾದಿಯು, ಪ್ರತಿವಾದಿ ಕಂಪನಿಯ ಮೊಹರು ಹೊಂದಿದ ಒಂದು ಶೇರು ಸರ್ಟಿಫಿಕೇಟನ್ನು ವರ್ಗಾವಣೆ ಪಡೆದವನಾಗಿದ್ದಾನೆ. ಆ ಕಂಪನಿಯ ಕಾರ್ಯದರ್ಶಿ ಶೇರು ಸರ್ಟಿಫಿಕೇಟ್ ಹಂಚುವಾಗ ಇಬ್ಬರು ನಿರ್ದೇಶಕರ ಸಹಿಗಳನ್ನು ಖೊಟ್ಟಿ ರುಜು ಮಾಡಿ ಕಂಪನಿ ಮೊಹರನ್ನು ಹಾಕಿರುತ್ತಾನೆ. ಈ ಖೊಟ್ಟಿ ರುಜು ದಸ್ತಾವೇಜಿಗೆ ಬದ್ಧವಾಗಲು ಕಂಪನಿ ನಿರಾಕರಿಸುತ್ತದೆ. ತೀರ್ಮಾನಿಸಿ.

(c) 'X' a minor was registered as a shareholder. After attaining the majority he received the dividend from the company. Subsequently, the company went into liquidation. 'X' denies liability as a shareholder. Decide.

'ಕ್ಷ' ಎಂಬ ಅಪ್ರಾಪ್ತ ವಯಸ್ಕ ಒಂದು ಕಂಪನಿ ಸದಸ್ಯನಾಗಿ ನೋಂದಾಯಿಸಲ್ಪಟ್ಟನು. 'ಕ್ಷ'ನು ಪ್ರಾಪ್ತ ವಯಸ್ಕನಾದ ನಂತರ ಕಂಪನಿಯಿಂದ ಲಾಭಾಂಶ ಸ್ವೀಕರಿಸಿದನು. ನಂತರ ಕಂಪನಿ ದಿವಾಳಿ ತೆಗೆಯುತ್ತದೆ. 'ಕ್ಷ'ನು ಸದಸ್ಯನಾಗಿ ತನ್ನ ಹೊಣೆಗಾರಿಕೆಯನ್ನು ಅಲ್ಲಗೆಳೆಯುತ್ತಾನೆ. ತೀರ್ಮಾನಿಸಿ.